ಶ್ರೀ ಸಿ. ಟಿ. ರವಿ (ಚಿಕ್ಕಮಗಳೂರು):– ಮಾನ್ಯ ಸಭಾಧ್ಯಕ್ಷರೇ, ಈ ನಾಡಿನ ಜೀವನಾಡಿಯಾಗಿರತಕ್ಕಂಥ ಕಾವೇರಿ ನದಿ ಮುಂದಿನ ನಾಲ್ಕೇ ದಶಕಗಳಲ್ಲಿ ಬತ್ತಿ ಹೋಗುತ್ತದೆ ಎನ್ನುವ ವರದಿ ದಿಗ್ಭ್ರಮೆ ಹುಟ್ಟಿಸಿದೆ. ನಮ್ಮ ಅನುಭವಕ್ಕೆ ಬಂದ ವಿಚಾರವೆಂದರೆ, ನಮ್ಮ ಕಣ್ಣಮುಂದೆಯೇ ನೂರಾರು ನದಿಗಳು, ಹಳ್ಳ-ಕೊಳ್ಳಗಳು ಬತ್ತಿ ಹೋಗಿವೆ. ಬೆಂಗಳೂರಿನ ಅರ್ಕಾವತಿ ನದಿ ಇವತ್ತು ಇಲ್ಲ. ವೃಷಭಾವತಿ ನದಿ ಇವತ್ತು ಕೊಳಚೆ ಚರಂಡಿಯಾಗಿ ಹರಿಯುತ್ತಿದೆ. ಇಂಥ ಪರಿಸ್ಥಿತಿಯಲ್ಲಿ, ರಾಜ್ಯದ ಜೀವನಾಡಿಯಾಗಿರತಕ್ಕಂಥ ಕಾವೇರಿಯೂ ಬತ್ತಿ ಹೋಗತಕ್ಕಂಥ ಅಪಾಯವಿರುವುದರಿಂದ ಇದರ ರಕ್ಷಣೆಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ. ಕಾವೇರಿ ನದೀಪಾತ್ರದ ಭಾಗದಲ್ಲಿ ಕಾಡು ನಾಶವಾಗಿ ನೀರನ್ನು ಹಿಡಿದಿಡತಕ್ಕಂಥ ವ್ಯವಸ್ಥೆ ದುರ್ಬಲವಾಗಿರುವುದರಿಂದ, ಇದು ಕಾವೇರಿ ನದಿ ಬತ್ತಿ ಹೋಗಲು ಬಹಳ ಮುಖ್ಯ ಕಾರಣವಾಗುತ್ತಿದೆ ಎಂದು ವರದಿ ಹೇಳುತ್ತಿದೆ. ಇದರ ಜೊತೆಗೆ, ಅವೈಜ್ಞಾನಿಕವಾದಂಥ ಬೆಳೆಗಳು, ಹಣವೇ ಪ್ರಧಾನವಾಗಿರತಕ್ಕಂಥ ಬೆಳೆಗಳನ್ನು ಬೆಳೆಯುತ್ತಿರುವುದರಿಂದ ಪ್ರಾಕೃತಿಕ ಅಸಮತೋಲನ ಉಂಟಾಗುತ್ತಿರುವುದು ಕೂಡ ಈ ನದಿ ಬತ್ತಿ ಹೋಗಲು ಕಾರಣವಾಗುತ್ತಿದೆ. ಅತಿಯಾದ ಜಲದ ಬಳಕೆ ಮುಂದಿನ ದಿನಗಳಲ್ಲಿ ಈ ನಾಡಿನಲ್ಲಿ ಶಾಶ್ವತವಾದಂಥ ಬರವನ್ನು ಸೃಷ್ಟಿಸಬಹುದು. ಆ ಕಾರಣಕ್ಕೋಸ್ಕರವಾಗಿ ನಾನು ಕಳಕಳಿಯಿಂದ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಕಾವೇರಿಯನ್ನು ಉಳಿಸಿಕೊಳ್ಳಲಿಕ್ಕೆ ಮತ್ತು ಬತ್ತಿ ಹೋಗಿರತಕ್ಕಂಥ ಹತ್ತಾರು ನದಿಗಳು ಮತ್ತೆ ಹರಿಯುವಂತೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ಎನ್ನುವ ಮಾಹಿತಿಯನ್ನು ತಮ್ಮ ಮೂಲಕ ಬೇಡುತ್ತೇನೆ.

ಡಾ: ಹೆಚ್. ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):– ಮಾನ್ಯ ಸಭಾಧ್ಯಕ್ಷರೇ, ಉತ್ತರವನ್ನು ತರಿಸಿ ಕೊಡುತ್ತೇವೆ.

(ಓ) ವಿಷಯ : ವಿರಾಜಪೇಟೆ ತಾಲ್ಲೂಕಿನಲ್ಲಿ ಅಕ್ರಮವಾಗಿ ಕೇರಳಕ್ಕೆ ಮರಳು ಸಾಗಾಣಿಕೆಯಾಗುತ್ತಿರುವ ಬಗ್ಗೆ.

ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ):– ಮಾನ್ಯ ಅಧ್ಯಕ್ಷರೇ, ನಮ್ಮ ವಿರಾಜಪೇಟೆ ತಾಲ್ಲೂಕು ಗಡಿ ಪ್ರದೇಶವಾಗಿದೆ. ಅಲ್ಲಿ ಅಕ್ರಮವಾಗಿ ಮರಳು ಸಾಗಾಣಿಕೆಯ ಒಂದು ದೊಡ್ಡ ದಂಧೆ ನಡೆಯುತ್ತಿದೆ. ಅಲ್ಲಿ ತೆಗೆಯುವಂಥ ಮರಳನ್ನು ಕೇರಳಕ್ಕೆ ರವಾನೆ ಮಾಡುತ್ತಿದ್ದಾರೆ. ಅಂತರರಾಜ್ಯವಾಗಿರತಕ್ಕಂಥ ಕೇರಳಕ್ಕೆ ಇಲ್ಲಿಂದ ಮರಳು ರವಾನೆ ಯಾಗಬೇಕು ಎಂದರೆ ಅದಕ್ಕೆ ಯಾವುದೋ ಒಂದು ಪರವಾನಗಿ ಇಲ್ಲ. ಈ ವಿಚಾರದಲ್ಲಿ, ಈ ಹಿಂದೆ ಅಂದರೆ 2003ರಲ್ಲಿ ನಾಲ್ಕೇರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಈ ಕಳ್ಳಸಾಗಾಣಿಕೆಯನ್ನು ತಡೆಯಬೇಕು ಎನ್ನುವ ಸಂದರ್ಭದಲ್ಲಿ ಗುಂಡೇಟಿಗೆ ಬಲಿಯಾದರು. ವಿದ್ಯಾರ್ಥಿಯಾಗಿದ್ದಂಥ ಕೃತಿ ಚೆಂಗಪ್ಪ ಎನ್ನುವ ಅವರ ಅಮಾಯಕ ಮಗನೂ ಕೂಡ ಗುಂಡೇಟಿಗೆ ಈಡಾಗಿ, ಇವತ್ತು ನಡೆಯಲೂ ಕೂಡ ಸಾಧ್ಯವಿಲ್ಲದಂಥ ಪರಿಸ್ಥಿತಿಯಲ್ಲಿದ್ದಾನೆ. ಈ ಒಂದು ಕಳ್ಳ ಸಾಗಾಣಿಕೆಯನ್ನು ನಿಲ್ಲಿಸಬೇಕು ಎಂದು

ಪ್ರಯತ್ನ ಮಾಡಿದ್ದಕ್ಕೆ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿದ್ದಂಥ ಮಿಟ್ಟು ಚೆಂಗಪ್ಪನವರು ಬಲಿಯಾಗಿ ದೈವಾಧೀನರಾದರು. ಅವರಿಗೆ ಸರ್ಕಾರದಿಂದ ಏನೊಂದು ಪರಿಹಾರವೂ ಸಿಗಲಿಲ್ಲ. ಇವತ್ತು ನಾನು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತಿರುವುದೇನೆಂದರೆ, ಮರಳು ಕಳ್ಳಸಾಗಾಣಿಕೆಯ ದಂಧೆಯನ್ನು ನಿಲ್ಲಿಸುವಂಥ ಕೆಲಸವನ್ನು ತಾವು ಕಠಿಣವಾಗಿ ಮಾಡಬೇಕು. ಏಕೆಂದರೆ, ನಮ್ಮ ರಾಜ್ಯದಿಂದ ಕೇರಳ ರಾಜ್ಯಕ್ಕೆ ಮರಳನ್ನು ಸಾಗಾಣಿಕೆ ಮಾಡಲು ಯಾರೂ ಪರವಾನಗಿಯನ್ನು ಕೊಡುತ್ತಿಲ್ಲ. ಆದರೆ, ಈ ಮರಳ ದಂಧೆಯನ್ನು ಮಾಡುತ್ತಿರುವಂಥ ವ್ಯಕ್ತಿಗಳು ನಕಲಿ ರಸೀತಿಗಳನ್ನು ಇಲಾಖೆಯವರಿಂದ ಪಡೆದುಕೊಂಡು, ಮರಳನ್ನು ಕೇರಳಕ್ಕೆ ರವಾನೆ ಮಾಡಲು ತಮ್ಮದೇ ಆದಂಥ ರೀತಿಯಲ್ಲಿ ಅದನ್ನು ಭರ್ತಿಮಾಡಿ, ಗಡಿ ಪ್ರದೇಶಗಳಲ್ಲಿರುವಂಥ ಚೆಕ್‌ಪೋಸ್ಟ್‌ನವರಿಗೆ ಈ ಕಳ್ಳ ರಸೀತಿಗಳನ್ನು ತೋರಿಸಿ ನಮಗೆ ಪರವಾನಗಿ ಇದೆ, ಅದಕ್ಕೋಸ್ಕರ ಸಾಗಾಣಿಕೆ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ರಸೀತಿಗಳನ್ನು ಫಿಲ್-ಅಪ್ ಮಾಡಿಕೊಳ್ಳುವಂಥ ವ್ಯವಸ್ಥೆಯನ್ನು ಸಂಪೂರ್ಣವಾಗಿ ಗುತ್ತಿಗೆದಾರರಿಗೆ ಕೊಟ್ಟುಬಿಟ್ಟಿದ್ದಾರೆ. ಅದು ನಿಲ್ಲಬೇಕು. ಗುತ್ತಿಗೆದಾರರಿಗೆ ಈ ರೀತಿ ಖಾಲಿ ರಸೀತಿಗಳನ್ನು ಕೊಟ್ಟಿರತಕ್ಕಂಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಮತ್ತು ಅಂತರರಾಜ್ಯಗಳಿಗೆ ಯಾವುದೇ ರೀತಿಯಲ್ಲಿ ಮರಳು ಸಾಗಾಣಿಕೆಯಾಗದಿರುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:- ಮಾನ್ಯ ಸಚಿವರು, ಯಾರು ಉತ್ತರ ಕೊಡುತ್ತೀರಿ ಶೂನ್ಯವೇಳೆಯ ಪ್ರಸ್ತಾಪಕ್ಕೆ ಅವರು ನೋಟೀಸ್ ಕೊಟ್ಟ ತಕ್ಷಣ ಸಂಬಂಧಪಟ್ಟ ಸಚಿವಾಲಯಕ್ಕೆ ಕಳುಹಿಸಿಕೊಡುತ್ತೇವೆ. ಅದರ ಮರುದಿನವಾದರೂ ಅದಕ್ಕೆ ಉತ್ತರ ಬರಬೇಕಾಗುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ:- ನಿಮ್ಮ ಮಾತನ್ನೇ ಯಾರೂ ಗಮನಿಸುತ್ತಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:- ನಿಮ್ಮ ಮಾತನ್ನೇ ಅವರು ಗಮನಿಸುತ್ತಿಲ್ಲ, ಇನ್ನು ಬಸವರಾಜುರವರ ಪ್ರಶ್ನೆಗೆ ಉತ್ತರ ಕೊಡುವವರು ಯಾರು?

ಅಧ್ಯಕ್ಷರು:- ಆಯಿತು, ಗಮನಿಸುತ್ತಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ:- ಅವರು ಕೇಳಿದ ಪ್ರಶ್ನೆಯಾದರೂ ಅವರಿಗೆ ಅರ್ಥವಾಯಿತೇ? ಯಾರಿಗಾದರೂ ಅವರ ಸಮಸ್ಯೆಯಾದರೂ ಅರ್ಥವಾಯಿತೇ?

ಅಧ್ಯಕ್ಷರು: ಆಯಿತು, ಅವರು ಗಮನಿಸುತ್ತಿದ್ದಾರೆ. ಈಶ್ವರಪ್ಪನವರೇ ನೀವು ಕುಳಿತುಕೊಳ್ಳಿ.

ಡಾ: ಎಚ್. ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಅವರು ಮರಳು ಕಳ್ಳಸಾಗಾಣಿಕೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಉತ್ತರವನ್ನು ಒದಗಿಸಿಕೊಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:- ಇದು ಉತ್ತರವೇ?

ಅಧ್ಯಕ್ಷರು:– ಆಯಿತು, ಕುಳಿತುಕೊಳ್ಳಿ, ಉತ್ತರವನ್ನು ಒದಗಿಸುತ್ತಾರೆ.

(ಟಿ) ವಿಷಯ : ಬೆಂಗಳೂರಿನ ವಿಶ್ವೇಶ್ವರಪುರದಲ್ಲಿ ವಿನ್ನಿವಿಂಕ್ ಎನ್ನುವವರು ಅಧಿಕ ಬಡ್ಡಿ ಕೊಡುತ್ತೇವೆಂದು ಏಳಿ ಸಾರ್ವಜನಿಕರಿಂದ ಹಣ ಸಂಗ್ರಹಿಸುತ್ತಿರುವ ಬಗ್ಗೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಮಾನ್ಯ ಅಧ್ಯಕ್ಷರೇ, ಬ್ಯಾಂಕುಗಳಲ್ಲಿ ಬಡ್ಡಿದರ ಕಡಿಮೆಯಾದಮೇಲೆ, ಅನೇಕ ಜನರು ಸಾರ್ವಜನಿಕರನ್ನು ತಪ್ಪುದಾರಿಗೆ ತೆಗೆದುಕೊಂಡು ಹೋಗಲು ಇಷ್ಟು ಬಡ್ಡಿ ಕೊಡುತ್ತೇವೆ, ಅಷ್ಟು ಬಡ್ಡಿ ಕೊಡುತ್ತೇವೆ ಎಂದು ಪೇಪರುಗಳಲ್ಲಿ ಅಡ್ವರ್ಟೈಸ್‌ಮೆಂಟ್ ಕೊಟ್ಟು, ಜನರನ್ನು ಅಟ್ರ್ಯಾಕ್ಟ್ ಮಾಡಿ ಹಣ ಸಂಗ್ರಹಿಸಿ ಆಮೇಲೆ ವಲಸೆ ಹೋಗುವುದು ಬಹಳ ಸಹಜವಾಗಿದೆ. ಈಗ ಪ್ರಸ್ತುತ ಬೆಂಗಳೂರಿನ ವಿಶ್ವೇಶ್ವರಪುರಂನಲ್ಲಿ ವಿನ್ನಿವಿಂಕ್ ಎನ್ನುವವರು ಶೇಕಡಾ 30 ರಿಂದ 40 ರಷ್ಟು ಬಡ್ಡಿ ಕೊಡುತ್ತೇವೆ ಎಂದು ಹೂಡಿಕೆದಾರರಿಗೆ ಒಂದು ಅಡ್ವರ್ಟೈಸ್‌ಮೆಂಟ್ ಕೊಟ್ಟಿದ್ದು, ಬೆಂಗಳೂರಿನಲ್ಲಿ ಇಡೀ ಜನಕ್ಕೂ ನಿಂತುಕೊಂಡು, ಮುಗಿಬಿದ್ದು ಅವರಲ್ಲಿ ದುಡ್ಡನ್ನು ಇನ್‌ವೆಸ್ಟ್ ಮಾಡುತ್ತಿದ್ದಾರೆ. ಇದರ ಬಗ್ಗೆ ಒಂದು ತನಿಖೆಯಾಗಬೇಕು. ಈತ ಆ ದುಡ್ಡನ್ನು ಏನು ಮಾಡುತ್ತಿದ್ದಾನೆ? ಎಲ್ಲಿಡುತ್ತಿದ್ದಾನೆ? ಡೆಪಾಸಿಟರ್ಸ್‌ಗೆ ಗ್ಯಾರಂಟಿ ಏನು? ಸೆಕ್ಯುರಿಟಿ ಏನು ಎನ್ನುವ ಬಗ್ಗೆ ಸರ್ಕಾರದವರು ಒಂದು ಹೇಳಿಕೆ ಕೊಡಬೇಕು ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಅಧ್ಯಕ್ಷರು:– ಇದಕ್ಕೆ ಯಾರು ಉತ್ತರ ಹೇಳುತ್ತೀರಿ? ಸಚಿವರು ಯಾರೂ ಹೇಳುವುದಿಲ್ಲವೇ?

ಶ್ರೀ ಜೆ. ಸಿ. ಮಾಧುಸ್ವಾಮಿ:– ಬೆಂಗಳೂರಿನ ವಿಶ್ವೇಶ್ವರಪುರಂನಲ್ಲಿ ವಿನ್ನಿವೆಂಕ್ ಎನ್ನುವ ಸಂಸ್ಥೆ ನಿಮ್ಮ ಕ್ಷೇತ್ರದಲ್ಲಿಗೆ ಶೇಕಡಾ 30 ರಿಂದ 40 ರಷ್ಟು ಬಡ್ಡಿ ಕೊಡುತ್ತೇವೆ ಎಂದು ಅಡ್ವರ್ಟೈಸ್‌ಮೆಂಟ್ ಮಾಡಿದ್ದು, ಸಾರ್ವಜನಿಕರು ಕ್ಯೂ ನಿಂತು ಅವನಲ್ಲಿ ಇನ್‌ವೆಸ್ಟ್ ಮಾಡುತ್ತಿದ್ದಾರೆ. ಮುಂದೊಂದು ದಿವಸ ಇವನು ಈ ನಾಡಿನಿಂದ ಓಡಿಹೋಗುವಂಥ ಮನುಷ್ಯನಾಗಿದ್ದರೆ ನಾಳೆ ಆ ಇನ್‌ವೆಸ್ಟರ್ ಗತಿ ಏನು? ಶೇಕಡಾ 15ಕ್ಕಿಂತ ಎಚ್ಚು ಬಡ್ಡಿ ಯಾರೂ ತೆಗೆದುಕೊಳ್ಳಬಾರದು ಎಂದು ಸನ್ಯಾನ್ಯ ಕೃಷ್ಣರವರ ಕಾಲದಲ್ಲಿ ಈ ಸದನದಲ್ಲಿ ಶಾಸನವಾಗಿದೆ. ಶೇಕಡಾ 15ಕ್ಕಿಂತ ಹೆಚ್ಚು ಇಂಟರೆಸ್ಟನ್ನು ಯಾರೂ ಕೂಡ ಕ್ಲೈಂ ಮಾಡತಕ್ಕದ್ದಲ್ಲ ಎಂದು ಇದೇ ಮನೆಯಲ್ಲಿ ಶಾಸನ ಮಾಡಿದ್ದೇವೆ. ಆದರೆ, ಅವನು ಶೇಕಡಾ 30ರಷ್ಟು, 40ರಷ್ಟು ಬಡ್ಡಿ ಕೊಡುತ್ತೇನೆ ಎಂದು ಓಪನ್ ಅಡ್ವರ್ಟೈಸ್‌ಮೆಂಟ್ ಕೊಡುತ್ತಾನೆ. ಇನ್‌ವೆಸ್ಟ್ ಮಾಡಲು ಜನ ಕ್ಯೂ ನಿಂತಿದ್ದಾರೆ. ಅದರ ಬಗ್ಗೆ ಏನಾದರೊಂದು ತನಿಖೆ ಮಾಡಿ ಇಂಥ ಫೇಕ್ ಫೈನ್ಯಾನ್‌ಷಿಯಲ್ ಕಂಪನಿಗಳ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುವಿರಾ? ಎನ್ನುವ ಬಗ್ಗೆ ನನಗೆ ಉತ್ತರ ಬೇಕು.

ಶ್ರೀ ಆರ್. ವಿ. ದೇಶಪಾಂಡೆ (ಮಾನ್ಯ ಸಹಕಾರ ಸಚಿವರು):– ಮಾನ್ಯ ಸದಸ್ಯರು ಹೇಳಿದ ವಿಚಾರದ ಪ್ರಕಾರ ನಡೆಯುತ್ತಿದ್ದರೆ, it is a very seriu matter ಏಕೆಂದರೆ ಶೇಕಡಾ